Pw1

**ಮೂಲ ದಾವಾ ನಂ: 250/2023**

**<u>ಮೆ॥ ಸಿವಿಲ್ ನ್ಯಾಯಾಧೀಶರು ಮುದ್ದೇಬಿಹಾಳ ಇವರ</u>**

**<u>ನ್ಯಾಯಾಲಯದಲ್ಲಿ</u>**

1) ಖಾಜಾಬಿ ಗಂಡ ಮಹಿಬೂಬಸಾಬ ಹವೇಲಿ
ಸಾ; ನಾಲತವಾಡ, ತಾ: ಮುದ್ದೇಬಿಹಾಳ –ವಾದಿ

**ವಿರುದ್ಧ**

1) ನೇಹಾನಾಜ ಗಂಡ ಮಹ್ಮದಶಫೀಕ ಹವೇಲಿ
ಹಾಗೂ ಇತರರು –ಪ್ರತಿವಾದಿಯರು

**<u>ವ್ಯವಹಾರ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4ರ ಅಡಿ ವಾದಿಯ</u>**

**<u>ಮುಖ್ಯ ವಿಚಾರಣೆ ಕುರಿತು ಪ್ರಮಾಣ ಪತ್ರ</u>**

ಇದರಲ್ಲಿ ನಾನು ಖಾಜಾಬಿ ಗಂಡ ಮಹಿಬೂಬಸಾಬ ಹವೇಲಿ, ವಯಾ: 47 ವರ್ಷ, ಉದ್ಯೋಗ: ಮನೆಗೆಲಸ, ಸಾ: ನಾಲತವಾಡ, ತಾ: ಮುದ್ದೇಬಿಹಾಳ ಜಿ: ವಿಜಯಪುರ, ಹೀಗೆ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಏನೆಂದರೆ–

1) ಸದರ ದಾವಾದಲ್ಲಿ ನಾನು ವಾದಿ ಇದ್ದು, ದಾವಾದ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ. ಅಸಲರ್ಜಿಯಲ್ಲಿನ ಸಂಗತಿಗಳು ನಿಜವಿದ್ದು, ಅವು ಈ ಪ್ರಮಾಣಪತ್ರದ ಒಂದು ಭಾಗವಾಗಿರುತ್ತವೆ.

2) ದಾವಾದಲ್ಲಿಯ 1ನೇ ಪ್ರತಿವಾದಿಯು ನನ್ನ ಖಾಸ ಮಗನಾದ ಮಹ್ಮದಶಫೀಕ ತಂದೆ ಮಹಿಬೂಬಸಾಬ ಹವೇಲಿ ಈತನ ಹೆಂಡತಿ ಇರುತ್ತಾಳೆ. 2 ಮತ್ತು 3ನೇ ಪ್ರತಿವಾದಿಯರು ನನ್ನ ಖಾಸ ಮೊಮ್ಮಕ್ಕಳಿದ್ದು, ಮೃತ ನನ್ನ ಮಗ ಮಹ್ಮದಶಫೀಕನ ಮಕ್ಕಳು ಇರುತ್ತಾರೆ. 4, 5ನೇ ಪ್ರತಿವಾದಿಯರು HESCOM ಅಧಿಕಾರಿಗಳು ಇರುತ್ತಾರೆ.

3) ನನ್ನ ಮಗನಾದ ಮಹ್ಮದಶಫೀಕ ಈತನು HESCOM ಕಚೇರಿಯ ಸ್ಟೇಷನ್ ಪರಿಚಾರಕ ದರ್ಜೆ–2 ಅಂತಾ 33ಕೆ.ವ್ಹಿ. ಸ್ಟೇಷನ್ ತಂಗಡಗಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ದಿನಾಂಕ 06–08–2022 ರಂದು ತಂಗಡಗಿ ಗ್ರಾಮದಲ್ಲಿ ನಿಧನ ಹೊಂದಿರುತ್ತಾನೆ. ಮೃತ

No. of Corrections

S. S. MALAGATTI
NOTARY
MUDDEBIHAL

ನನ್ನ ಮಗ ಮಹ್ಮದಶಫೀಕನಿಗೆ ನಾನು ಖಾಸ ತಾಯಿ ಇದ್ದು, ನಾನು ಮತ್ತು 1 ರಿಂದ 3ನೇ ಪ್ರತಿವಾದಿಯರು ಮೈತ ನನ್ನ ಮಗನ ಸೀದಾ ವಾರಸುದಾರರು ಇರುತ್ತೇವೆ. ವಸ್ತು ಸ್ಥಿತಿ ಹೀಗಿದ್ದು, ಮೈತ ನನ್ನ ಮಗನ ಹೆಂಡತಿಯಾದ 1ನೇ ಪ್ರತಿವಾದಿಯು ನನಗೆ ತಿಳಿಯದಂತೆ ನನ್ನ ಬೆನ್ನ ಹಿಂದೆ, ನನಗೆ ಏನೂ ಮಾಹಿತಿ ನೀಡದೆ, ನನ್ನ ಮೈತ ಮಗನಿಗೆ ಬರತಕ್ಕ ಸೇವಾ ಪರಿಹಾರದ ಹಣ ಹಾಗೂ ಇತರ ಸೌಲಭ್ಯಗಳನ್ನು ತಾನೊಬ್ಬಳೇ ಪಡಕೊಳ್ಳುವ ತಜಿವಿಜಿಯಲ್ಲಿ ಇರುತ್ತಾಳೆ. ಹಾಗಾದಲ್ಲಿ ನನಗೆ ಬರತಕ್ಕ ಕಾಯ್ದೆಶೀರ ಹಿಸ್ಸಾ ಮುಳಗಿ ಹೋಗಿ ನನಗೆ ತುಂಬಿಬಾರದ ಹಾನಿ ವ ತೊಂದರೆಯಾಗುತ್ತದೆ.

4) ಅದಲ್ಲದೆ, ನನ್ನ ಒಪ್ಪಿಗೆ ಪಡೆಯದೆ, ಈಗಾಗಲೆ ಮೈತ ನನ್ನ ಮಗನ ಅನುಕಂಪದ ಆಧಾರದ ಮೇಲೆ ನೌಕರಿ ಸಹ ಪಡೆದುಕೊಂಡಿರುತ್ತಾಳೆ. ಅಲ್ಲದೆ, ಸರ್ಕಾರದಿಂದ ಬರತಕ್ಕ ಯಾವತ್ತೂ ಸೌಲಭ್ಯಗಳನ್ನು 1ನೇ ಪ್ರತಿವಾದಿಯು 4, 5ನೇ ಪ್ರತಿವಾದಿಯರನ್ನು ಒಂದು ಮಾಡಿಕೊಂಡು, ತಾನೊಬ್ಬಳೇ ಪಡಕೊಳ್ಳುವ ದುಷ್ಟ ಇರಾದೆಯನ್ನು ಹೊಂದಿರುತ್ತಾಳೆ. ಹಾಗಾದಲ್ಲಿ, ಮೈತ ಮಗನ ತಾಯಿಯಾದ ನನಗೆ ಕಾನೂನು ಪ್ರಕಾರ ಬರತಕ್ಕ ಮೈತನ ಪರಿಹಾರದ ಹಣ ವ ಇತರೆ ಸೌಲಭ್ಯ ಸಿಗದೇ ಅದರಿಂದ ನಾನು ವಂಚಿತವಾಗುವ ಸಂಭವ ಅದೆ.

5) ನಾನು ಮೈತ ನನ್ನ ಮಗನಾದ ಮಹ್ಮದಶಫೀಕ ಈತನ ನೇರವಾದ ಕ್ಲಾಸ್–I ವಾರಸುದಾರಳಿದ್ದು, ನನ್ನ ಮಗನ ಮರಣದ ನಂತರ ಬರತಕ್ಕ ಮೈತನ ಪರಿಹಾರದ ಹಣ ವ ಸೌಲಭ್ಯಗಳಲ್ಲಿ ನನ್ನದು ಕಾಯ್ದೆಶೀರ ¼ ಹಿಸ್ಸಾ ಇದ್ದು, ಅದನ್ನು ಪಡಕೊಳ್ಳಲು ಹಕ್ಕುದಾರಳು ಇರುತ್ತೇನೆ ಅಂತಾ ಘೋಷಿಸಿಕೊಳ್ಳಲು ಸದರ ದಾವೆಯನ್ನು ಮಾಡಿರುತ್ತೇನೆ ಮತ್ತು ನನ್ನ ಮೈತ ಮಗನಿಂದ ಬರತಕ್ಕ death cum monitory benefits ನ್ನು ದಾವಾದ 4 ಮತ್ತು 5ನೇ ಪ್ರತಿವಾದಿಯರ ಕಡೆಯಿಂದ ಪಡಕೊಳ್ಳಲು ಹಕ್ಕುದಾರಳು ಇರುತ್ತೇನೆ ಅಂತಾ ಘೋಷಿಸಿ, ಸದರಿ 4 ಮತ್ತು 5ನೇ ಪ್ರತಿವಾದಿಯರಿಂದ ಮೈತ ನನ್ನ ಮಗನಿಗೆ ಬರತಕ್ಕ ಯಾವತ್ತೂ ಸೌಲಭ್ಯಗಳನ್ನು ನನಗೆ ಕೊಡಿಸಲು ಆದೇಶಿಸಲು ವಿನಂತಿ ಅದೆ. ಅಲ್ಲದೆ, 1ನೇ ಪ್ರತಿವಾದಿಯು ನನ್ನ ಪಾಲಿಗೆ ಬರತಕ್ಕ ಪರಿಹಾರ ಹಣವನ್ನು ವ ಸರ್ಕಾರಿ ಇತರೆ ಸೌಲಭ್ಯಗಳನ್ನು 4, 5ನೇ ಪ್ರತಿವಾದಿಯರ ಕಡೆಯಿಂದ

No. of Corrections Nil

S. S. MALAGATTI
NOTARY

KMH

NOTARY ★ S. S. MALA MUDDEB. G.O. No: L.C.L. 202 Exp. Dt: 16-01-20 GOVT. OF KAR

ಪಡೆದುಕೊಳ್ಳಬಾರದು ಅಂತಾ 1ನೇ ಪ್ರತಿವಾದಿಯ ಮೇಲೆ ನಿರಂತರ ತಾಕೀದಿ ಹುಕುಂ ಆಗುವುದು ಅವಶ್ಯವಿದೆ.

6) ಸದರ ನನ್ನ ದಾವಾಕ್ಕೆ ನನ್ನ ಮಗನಾದ ಮಹ್ಮದಶಫೀಕ ಈತನು ದಿನಾಂಕ 06-08-2022 ರಂದು ಮೃತವಾದ ನಂತರ ಆತನಿಗೆ ಸಿಗುವ Death cum monitory benefitsನ್ನು ಪ್ರತಿವಾದಿಯರು ಮೋಸದಿಂದ ಪಡಕೊಳ್ಳುವ ತಜಿವಿಜಿಯಲ್ಲಿದ್ದಾಗ, ಸದರ ದಾವಾಕ್ಕೆ ಅದೇ ದಿನ ವ ನಂತರ ಕಾರಣ ಉಂಟಾಗಿದ್ದು ಇರುತ್ತದೆ.

7) ಸದರ ದಾವಾದಲ್ಲಿ 1 ರಿಂದ 3ನೇ ಪ್ರತಿವಾದಿಯರ ಪರವಾಗಿ ಸುಳ್ಳು ಮಜಕೂರಿನ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು ಇರುತ್ತದೆ.

ಕಾರಣ ಮೆ॥ ರವರು ಸದರ ದಾವಾದಲ್ಲಿಯ ನನ್ನ ವಿನಂತಿ ಮಾಗಣಿ ಪ್ರಕಾರ ದಾವೆಯನ್ನು ಡಿಕ್ರಿ ಮಾಡುವುದು ನ್ಯಾಯದ ಹಿತ ದೃಷ್ಟಿಯಿಂದ ಅತೀ ಅವಶ್ಯವಿರುತ್ತದೆ ಅಂತಾ ಮಾಡಿದ ಸತ್ಯ ಪ್ರಮಾಣಪತ್ರ.

ಈ ಮೇಲೆ ಬರೆದ ಯಾವತ್ತು ವಿಷಯಗಳು ನನ್ನ ಸ್ವಂತ ಮಾಹಿತಿ ವ, ತಿಳುವಳಿಕೆ ಪ್ರಕಾರ ಹೇಳಿ ಬರೆಯಿಸಿದ್ದು ನಿಜವಿರುತ್ತದೆ.

ಮುದ್ದೇಬಿಹಾಳ

ದಿನಾಂಕ : 04-08-2026

KMH

ಪ್ರಮಾಣಿಕರ್ತಳ ಸಹಿ

ಸದರಿಯವರ ಪರಿಚಯ ನನಗೆ ಇರುತ್ತದೆ.

SWORN TO BEFORE ME

(ಎಮ್. ಎಚ್. ಹಾಲಣ್ಣವರ)

ವಕೀಲರು, ಮುದ್ದೇಬಿಹಾಳ

S. S. MALAGATTI
NOTARY
MUDDEBIHAL.

-4 AUG 2026

No. of Corrections

S. S. MALAGATTI
NOTARY
MUDDEBIHAL

NOTARY ★ GOVT. OF KARNATAKA ★ S.S. MALAGATTI MUDDEBIHAL

ಮೂಲ ದಾವಾ ನಂ: 250/2023

ಪಿ.ಡಬ್ಲ್ಯೂ- 1

**ದಿಃ 4.8.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ**

**ನಾನು ನನ್ನ ಮುಖ್ಯ ವಿಚಾರಣೆ ಪತ್ರವನ್ನು ಶಪತ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಸಂಗತಿಗಳು ನನ್ನ ಮಾಹಿತಿ ಮತ್ತು ತಿಳುವಳಿಕೆ ಮೇರೆಗೆ ಸತ್ಯವಾಗಿರುತ್ತದೆ.**

**ನಾನು ನನ್ನ ಪರವಾಗಿ ದಾಖಲೆಗಳನ್ನು ಸಲ್ಲಿಸಿದ್ದು, ಅವುಗಳನ್ನು ನಿಶಾನೆಕರಿಸಲು ಕೋರಿಕೊಳ್ಳುತ್ತೇನೆ. ಸಾಕ್ಷಿಯು ಹಾಜರಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.**

| ನಿಶಾನೆ ಪಿ. | ದಾಖಲೆಗಳ ವಿವರ |
|---|---|
| 1 | ಮಹ್ಮದ ಶಫೀಕ ಹವೇಲಿರವರ ಮರಣ ಪ್ರಮಾಣಪತ್ರ |
| 2 | ಜೀವಂತ ಸದಸ್ಯರ ದೃಡೀಕರಣ ಪತ್ರ |
| 3 | ದಿಃ 13.7.2023 ರ ಪತ್ರದ ಪ್ರತಿ |
| 4 | ದಿಃ 1.6.2023 ರ ಪತ್ರದ ಪ್ರತಿ |

ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

KMH

ಓ ಹೇ ಕೇ ಸರಿ ಅದೆ.

4/8

ಸಿವ್ಹಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.